ಬೈಕ್‌ಗೆ ಕಾರು ಡಿಕ್ಕಿ: ಬ್ಯಾಂಕ್ ಉದ್ಯೋಗಿ ಸಾವು

ಬೆಂಗಳೂರು: ಸರ್ವಿಸ್ ರಸ್ತೆಯಿಂದ ಹೆದ್ದಾರಿಗೆ ಬೈಕ್ ತೆಗೆದು ಕೊಳ್ಳುತ್ತಿದ್ದಂತೆ ವೇಗವಾಗಿ ಬರುತ್ತಿದ್ದ ಕಾರು ಡಿಕ್ಕಿ ಹೊಡೆದ ಪರಿಣಾಮ ಬ್ಯಾಂಕ್ ಉದ್ಯೋಗಿ ಮೃತಪಟ್ಟಿರುವ ಘಟನೆ ಚಿಕ್ಕಜಾಲ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ರಾತ್ರಿ ನಡೆದಿದೆ. ಹೂಡಿಯ ತಿಗಳರ ಪಾಳ್ಯ ನಿವಾಸಿ ಪ್ರಶಾಂತ್ (31) ಮೃತಪಟ್ಟ ಬೈಕ್ ಸವಾರ. ಇವರು ಖಾಸಗಿ ಬ್ಯಾಂಕ್‌ವೊಂದರ ಉದ್ಯೋಗಿ. ಪ್ರಶಾಂತ್ ಅವರು ಬೈಕ್‌ನಲ್ಲಿ ರಾತ್ರಿ 11.45ರ ಸುಮಾರಿನಲ್ಲಿ ಏರ್‌ಪೋರ್ಟ್ ಸರ್ವಿಸ್ ರಸ್ತೆಯಲ್ಲಿ ಬಂದು ಏರ್‌ಪೋರ್ಟ್ ಟೋಲ್ ಬಳಿ ಹೆದ್ದಾರಿ ರಸ್ತೆಗೆ ತಿರುವು ಪಡೆದುಕೊಳ್ಳುತ್ತಿದ್ದಂತೆ ಕಾರು ಡಿಕ್ಕಿ ಹೊಡೆದ ಪರಿಣಾಮ ಗಂಭೀರ ಗಾಯಗೊಂಡು ಮೃತ ಪಟ್ಟಿದ್ದಾರೆ. ಸುದ್ದಿ ತಿಳಿದು ಚಿಕ್ಕಜಾಲ ಸಂಚಾರಿ ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ, ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

272 ಅಕ್ರಮ ಬಾಂಗ್ಲಾ ವಲಸಿಗರು ಗಡಿಪಾರು

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ನೆಲೆಸಿದ್ದ ಬಾಂಗ್ಲಾ ವಲಸಿಗರನ್ನು ಪತ್ತೆ ಹಚ್ಚಿ ಗಡಿಪಾರು ಮಾಡುವ ಪ್ರಕ್ರಿಯೆಯನ್ನು ಪೊಲೀಸರು ಚುರುಕುಗೊಳಿಸಿದ್ದಾರೆ.

ಈ ಕಾರ್ಯಾಚರಣೆಯಲ್ಲಿ ಇಲ್ಲಿಯವರೆಗೂ 178 ಪುರುಷರು, 94 ಮಹಿಳೆಯರ ಸಹಿತ ಒಟ್ಟು 272 ಜನ ಅಕ್ರಮ ವಲಸಿಗರನ್ನು ಗುರುತಿಸಿ ಗಡಿಪಾರು ಮಾಡಲಾಗಿದೆ. ಪತ್ತೆ ಹಚ್ಚಲಾದ ಅಕ್ರಮ ವಲಸಿಗರನ್ನು ಬಿಗಿ ಭದ್ರತೆಯೊಂದಿಗೆ ತ್ರಿಪುರಾದ ಗಡಿಯವರೆಗೆ ಕರೆದೊಯ್ದು, ಭದ್ರತಾ ಪಡೆಯ ಸಹಕಾರದೊಂದಿಗೆ ಗಡಿ ದಾಟಿಸುವ ಕಾರ್ಯ ನಡೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇದಲ್ಲದೆ ಬಾಂಗ್ಲಾದೇಶದ ಪ್ರಜೆಗಳನ್ನು ಭಾರತಕ್ಕೆ ಅಕ್ರಮವಾಗಿ ಕರೆತರುತ್ತಿದ್ದ ಜಾಲದ ಇಬ್ಬರು ಏಜೆಂಟ್‌ಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಅಕ್ರಮ ವಲಸಿಗರ ಹಿಂದೆ ವ್ಯವಸ್ಥಿತವಾದ ಮೂರು ಹಂತದ ಜಾಲ ಕೆಲಸ ಮಾಡುತ್ತಿರುವುದು ಪೊಲೀಸರ ತನಿಖೆಯಿಂದ ಬಯಲಾಗಿದೆ. ಮೊದಲು ಬಾಂಗ್ಲಾದೇಶದ ಪ್ರಜೆಗಳನ್ನು ಒಬ್ಬ ಏಜೆಂಟ್ ಭಾರತದ ಗಡಿಯವರೆಗೆ ಕರೆತಂದರೆ, ಗಡಿ ಭಾಗದಲ್ಲಿರುವ ಎರಡನೇ ಏಜೆಂಟ್ ಕಾನೂನುಬಾಹಿರವಾಗಿ ಗಡಿ ದಾಟಿಸಿ ಭಾರತದ ಒಳಕ್ಕೆ ತಂದು ಬಿಡುತ್ತಿದ್ದನು.

ಆ ನಂತರ ಅವರಿಗೆ ಇಲ್ಲಿನ ಸ್ಥಳೀಯ ಭಾಷೆಯ ಬೇಸಿಕ್ಸ್ ಕಲಿಸಿ, ನಕಲಿ ಐಡಿ ಕಾರ್ಡ್‌ಗಳನ್ನು ಸಿದ್ಧಪಡಿಸಲಾಗುತ್ತಿತ್ತು. ಬಳಿಕ ದೇಶದ ಬೇರೆ ಬೇರೆ ಭಾಗಗಳಲ್ಲಿ ಉದ್ಯೋಗ ಕೊಡಿಸಲಾಗುತ್ತಿತ್ತು. ಈ ವ್ಯವಸ್ಥಿತ ಜಾಲದ ಮೂಲಕ ವಲಸಿಗರು ನಗರದ ಹೋಟೆಲ್, ಗ್ಯಾರೇಜ್ ಹಾಗೂ ಕಟ್ಟಡ ನಿರ್ಮಾಣದಂತಹ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದರು ಎಂದು ಪೊಲೀಸರ ತನಿಖೆಯಿಂದ ಬಯಲಾಗಿದೆ. ಸದ್ಯ ಬಂಧಿತ ಏಜೆಂಟ್‌ಗಳಿಂದ ಹೆಚ್ಚಿನ ಮಾಹಿತಿ ಕಲೆಹಾಕಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಳೆದ ಮೂರು ವರ್ಷಗಳಲ್ಲಿ ಬಾಂಗ್ಲಾದೇಶ, ಪಾಕಿಸ್ತಾನ ಸೇರಿದಂತೆ ವಿವಿಧ ದೇಶಗಳಿಂದ ಅಕ್ರಮವಾಗಿ ರಾಜ್ಯದಲ್ಲಿ ನೆಲೆಯೂರಿದ್ದ 432 ಮಂದಿ ಅಕ್ರಮ ವಲಸಿಗರನ್ನು ಪತ್ತೆ ಹಚ್ಚಲಾಗಿತ್ತು. ಈ ಪೈಕಿ 255 ಮಂದಿಯನ್ನು ಪೊಲೀಸ್ ಇಲಾಖೆ ಗಡಿಪಾರು ಮಾಡಿತ್ತು. ನಗರದ ಹೊರವಲಯದಲ್ಲಿ ಅಕ್ರಮವಾಗಿ ನೆಲೆಸಿದ್ದ 53 ಮಂದಿ ಬಾಂಗ್ಲಾದೇಶಿಯರನ್ನು ಕೆಲ ತಿಂಗಳ ಹಿಂದೆ ಪೊಲೀಸರು ಪತ್ತೆ ಹಚ್ಚಿದ್ದರು. ಅನಧಿಕೃವಾಗಿ ರಾಜಧಾನಿಯಲ್ಲಿ ಬಾಂಗ್ಲಾ ನುಸುಳುಕೋರರ ವಿರುದ್ಧ ವಿಳಂಬವಾಗಿ ಕ್ರಮ ಕೈಗೊಂಡಿರುವ ಬಗ್ಗೆ ಸರಕಾರದ ವಿರುದ್ಧ ರಾಜ್ಯ ಬಿಜೆಪಿ ಕಿಡಿಕಾರಿತ್ತು. ಈ ಬೆನ್ನಲ್ಲೇ, ಬಾಂಗ್ಲಾದೇಶ ಸೇರಿ ವಿವಿಧ ದೇಶಗಳಿಂದ ಬಂದು ರಾಜ್ಯದಲ್ಲಿ ಬೀಡುಬಿಟ್ಟಿದ್ದ ಅಕ್ರಮ ವಲಸಿಗರ ಪತ್ತೆ, ಗಡಿಪಾರು ಹಾಗೂ ಈ ಬಗ್ಗೆ ಕೈಗೊಂಡಿರುವ ಕ್ರಮಗಳ ಕುರಿತು ಪೊಲೀಸ್ ಇಲಾಖೆ ಮಾಹಿತಿ ನೀಡಿತ್ತು.

ಲುಕ್ ಔಟ್ ನೋಟಿಸ್

ಕಳೆದ ಮೂರು ವರ್ಷಗಳಲ್ಲಿ 432 ಅಕ್ರಮ ವಲಸಿಗರನ್ನು ಪತ್ತೆ ಮಾಡಲಾಗಿದೆ. ಇದರ ಪೈಕಿ 370 ಮಂದಿ ಬಾಂಗ್ಲಾದೇಶದವರಾಗಿದ್ದಾರೆ. ಅಲ್ಲದೆ, ಪಾಕಿಸ್ತಾನದ 16 ಹಾಗೂ ಶ್ರೀಲಂಕಾದ 42 ಮಂದಿ ಇದ್ದಾರೆ. ಮೂರು ವರ್ಷಗಳಲ್ಲಿ 255 ಮಂದಿ ಅಕ್ರಮ ವಲಸಿಗರನ್ನು ಗಡಿಪಾರು ಮಾಡಲಾಗಿತ್ತು.

ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿದರೆ ದಂಡ

ಬೆಂಗಳೂರು: ಹಳೆ ಮದ್ರಾಸ್ ರಸ್ತೆಯಲ್ಲಿ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿರುವವರ ವಿರುದ್ದ ದಂಡ ವಿಧಿಸಿ ತೆರವು ಕಾರ್ಯಾಚರಣೆ ನಡೆಸುವುದರ ಜತೆಗೆ, ಸುಗಮ ಪಾದಚಾರಿ ಮಾರ್ಗವನ್ನು ನಿರ್ಮಿಸಿ ಎಂದು ಅಧಿಕಾರಿಗಳಿಗೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ ನೀಡಿದರು. ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಹಳೆ ಮದ್ರಾಸ್ ರಸ್ತೆಯ ಸ್ವಾಮಿ ವಿವೇಕಾನಂದ ಮೆಟ್ರೋ ನಿಲ್ದಾಣದಿಂದ ಹಲಸೂರು ಕೆರೆವರೆಗೆ ಅಧಿಕಾರಿಗಳೊಂದಿಗೆ ನಡಿಗೆ ಮೂಲಕ ಪರಿಶೀಲನೆ ನಡೆಸಿ ಮಾತನಾಡಿ, ಪಾದಚಾರಿ ಮಾರ್ಗಗಳಲ್ಲಿ ತಂಡಗಳನ್ನು ನಿಯೋಜಿಸಿ ಸಾಮೂಹಿಕ ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳಬೇಕು. ಪಾದಚಾರಿ ಮಾರ್ಗಗಳನ್ನು ಧೂಳು ಸೇರಿ ಸಂಪೂರ್ಣ ಸ್ವಚ್ಛಗೊಳಿಸಿ, ಸುಂದರವಾಗಿ ಕಾಣುವಂತೆ ಮಾಡಬೇಕು. ಎಲ್ಲೆಲ್ಲಿ ತ್ಯಾಜ್ಯ ಹಾಗೂ ಭಗ್ನಾವಶೇಷಗಳಿದ್ದರೂ ಕೂಡಲೇ ಅವನ್ನು ತೆರವುಗೊಳಿಸಿ ಸ್ವಚ್ಛತೆ ಕಾಪಾಡಬೇಕು. ಪಾದಚಾರಿ ಮಾರ್ಗಗಳಲ್ಲಿ ಹಾನಿಗೊಳಗಾದ ಸ್ಲ್ಯಾಬ್‌ಗಳು ಮತ್ತು ಕರ್ಬ್ ಸ್ಟೋನ್‌ಗಳನ್ನು ದುರಸ್ತಿಗೊಳಿಸಿ. ಪಾದಚಾರಿಗಳ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಬೇಕು. ಹಲಸೂರು ಕೆರೆ 106 ಎಕರೆ ಪ್ರದೇಶದಲ್ಲಿದ್ದು, 33.50 ಕೋಟಿ ರು.ವೆಚ್ಚದಲ್ಲಿ ಸಮಗ್ರ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ ಎಂದರು.

ನಗರದಲ್ಲಿ 1.2 ಕೋಟಿ ಮೀರಿದ ವಾಹನಗಳ ಸಂಖ್ಯೆ

ಬೆಂಗಳೂರು: ವರ್ಷದಿಂದ ವರ್ಷಕ್ಕೆ ಹೊಸ ವಾಹನಗಳ ನೋಂದಣಿ ಗಣನೀಯವಾಗಿ ಏರಿಕೆಯಾಗುತ್ತಿದ್ದು, ನಗರದಲ್ಲಿ ಪ್ರತಿನಿತ್ಯ ಸರಾಸರಿ 1200ಕ್ಕೂ ಅಧಿಕ ವಾಹನಗಳು ರಸ್ತೆಗಿಳಿಯುತ್ತಿವೆ.

2025–26ನೇ ವರ್ಷದಲ್ಲಿ 7.9 ಲಕ್ಷ ಹೊಸ ವಾಹನಗಳು ರಸ್ತೆಗಿಳಿದಿದ್ದು, ನಗರದಲ್ಲಿ ವಾಹನಗಳ ಸಂಖ್ಯೆ 1.2 ಕೋಟಿಯನ್ನೂ ದಾಟಿದೆ. ಕಳೆದ ವರ್ಷ 7.2 ಲಕ್ಷ ವಾಹನಗಳು ನೋಂದಣಿಯಾಗಿದ್ದರೆ, ಈ ವರ್ಷ ಬರೋಬ್ಬರಿ 7.9 ಲಕ್ಷ ವಾಹನಗಳು ನೋಂದಣಿಯಾಗಿವೆ. ನಗರದ ವಾಹನಗಳ ಸಂಖ್ಯೆಯಲ್ಲಿ ವಿಪರೀತ ಹೆಚ್ಚಳವು ಸಂಚಾರ ವ್ಯವಸ್ಥೆಯನ್ನು ಹದಗೆಡುವಂತೆ ಮಾಡಿದ್ದು, ಜಿಬಿಎ ಅಡಿಯಲ್ಲಿ ಬರುವ ಐದು ಕಾರ್ಪೋರೇಷನ್‌ಗಳ ಒಟ್ಟು ರಸ್ತೆ ಉದ್ದ 14,063 ಕಿಮೀ ಆಗಿದೆ. ಸದ್ಯ ನಗರದ ಪ್ರತೀ ಒಂದು ಕಿ.ಮೀ ರಸ್ತೆಗೆ ಸರಿಸುಮಾರು 900 ವಾಹನಗಳು ಸಂಚರಿಸುವಂತಾಗಿದೆ.

ಸಾರ್ವಜನಿಕ ವಾಹನಗಳಿಗೆ ಕಡಿಮೆ ಒಲವು: ನಗರದಲ್ಲಿ ಸಂಚಾರ ದಟ್ಟಣೆಯಿಂದಾಗಿ ಹೆಚ್ಚು ಜನ ದ್ವಿಚಕ್ರ ಅವಲಂಬಿಸಿದ್ದು, ಸಮಯಕ್ಕೆ ಸರಿಯಾಗಿ ತಲುಪದ ಜನರು 86 ಲಕ್ಷ ದಷ್ಟು ಬೈಕ್, ಸ್ಕೂಟರ್‌ಗಳನ್ನು ಬಳಕೆ ಮಾಡುತ್ತಿದ್ದಾರೆ. ಆದರೆ ಬಸ್‌ನಲ್ಲಿ ತೆರಳಿದರೆ ಸಂಚಾರ ದಟ್ಟಣೆಯಲ್ಲಿ ಸಿಲುಕಿಕೊಳ್ಳಬಹುದು ಮೆಟ್ರೋದ ಲಭ್ಯತೆ ಎಲ್ಲಾ ಕಡೆಗಿಲ್ಲ ಜತೆಗೆ ಟಿಕೆಟ್ ದರವೂ ಹೆಚ್ಚು ಎನ್ನುವ ಕಾರಣಕ್ಕೆ ಜನರು ಸಾರ್ವಜನಿಕ ವಾಹನಗಳ ಬದಲಾಗಿ ಸ್ವಂತ ವಾಹನ ಬಳಸುವಂತಾಗಿದೆ. ಐಟಿ ಕಂಪನಿ ಉದ್ಯೋಗಿಗಳು ಹೆಚ್ಚಿರುವ ಎಚ್‌ಎಸ್‌ಆರ್ ಲೇಔಟ್‌ನ ಆರ್‌ಟಿಒ ಆದಾಯದಲ್ಲಿ ಪ್ರಥಮ ಸ್ಥಾನದಲ್ಲಿದ್ದು, ಕೆಎ–01 ಎಚ್‌ಎಸ್‌ಆರ್ ಲೇಔಟ್‌ನ ಆರ್‌ಟಿಒ 2025–26 ನೇ ಸಾಲಿನಲ್ಲಿ 1273 ಕೋಟಿ ರುಪಾಯಿ ಆದಾಯ ಸಂಗ್ರಹಿಸುವ ಮೂಲಕ ರಾಜ್ಯದಲೇ ಪ್ರಥಮ ಸ್ಥಾನದಲ್ಲಿದೆ.

ಕಳೆದ ಮೂರು ವರ್ಷದಿಂದಲೂ ಈ ಆರ್‌ಟಿಒ ಪ್ರಮುಖ ಸ್ಥಾನದಲ್ಲಿದೆ. ಕಸ್ತೂರಿ ನಗರ ಆರ್‌ಟಿಒ 1098 ಕೋಟಿ ರು ಆದಾಯ ಹೊಂದಿದ್ದು, ಜಯನಗರ ಆರ್‌ಟಿಒ 969 ಕೋಟಿ ರು. ಆದಾಯ ಹೊಂದಿದೆ.

ಯಾವ ವಾಹನಗಳು ಎಷ್ಟೆಷ್ಟಿವೆ?

- ದ್ವಿಚಕ್ರ ವಾಹನಗಳು: 86 ಲಕ್ಷ
- ಕಾರುಗಳು: 24.8 ಲಕ್ಷ
- ಕ್ಯಾಬ್ ಮತ್ತು ಟ್ಯಾಕ್ಸಿಗಳು: 2.9 ಲಕ್ಷ
- ಆಟೋ ರಿಕ್ಷಾಗಳು: 3.8 ಲಕ್ಷ

ಮೊಬೈಲ್ ಕದಿಯುತ್ತಿದ್ದ 13 ಮಂದಿ ಸೆರೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಾರ್ಚ್ 28 ರಂದು ನಡೆದ ಐಪಿಎಲ್ ಪಂದ್ಯದ ವೇಳೆ ಮೊಬೈಲ್‌ಗೆ ಕನ್ನ ಹಾಕಿದ್ದ ಜಾರ್ಖಂಡ್ ಖದೀಮರು ಮತ್ತಷ್ಟು ಮಂದಿ ಸಿಕ್ಕಿದ್ದಾರೆ.

9 ಮಂದಿ ಅಪ್ರಾಪ್ತರನ್ನು ಬಳಸಿಕೊಂಡು ಮೊಬೈಲ್ ಕದಿಯುತ್ತಿದ್ದ ನಾಲ್ವರು ಬಂಧನವಾಗಿದ್ದು, 75 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ. ಆರ್‌ಸಿಬಿ ಹಾಗೂ ಎಸ್‌ಎಚ್‌ಆರ್ ನಡುವಿನ ಐಪಿಎಲ್ ಮ್ಯಾಚ್ ವೇಳೆ ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಅಭಿಮಾನಿಗಳ ಮೊಬೈಲ್ ಕದ್ದವರ ಸಂಖ್ಯೆ ಹೆಚ್ಚಾಗುತ್ತಲೇ ಇದೆ.

ಮೊಬೈಲ್ ಕಳೆದುಕೊಂಡವರ ದೂರಿನ ಅನ್ವಯ ತನಿಖೆ ನಡೆಸಿ ಈವರೆಗೆ ಒಟ್ಟು 75 ಮೊಬೈಲ್ ವಶಕ್ಕೆ ಪಡೆಯಲಾಗಿದೆ. ಜಾರ್ಖಂಡ್ ನಿಂದ ಅಪ್ರಾಪ್ತರ ಗ್ಯಾಂಗ್ ಕಟ್ಟಿಕೊಂಡು ಬಂದಿದ್ದ ಸೋಹನ್ ಕುಮಾರ್, ಸಂಜೀತ್ ಕುಮಾರ್, ಇಶಾಲ್‌ಕುಮಾರ್ ಮತ್ತು ಶುಭಮನ್ ಕುಮಾರ್‌ನ ಗ್ಯಾಂಗ್ ಕೃತ್ಯ ಎಸಗಿತ್ತು. ಈ ನಾಲ್ವರು ಆರೋಪಿಗಳು 9 ಮಂದಿ ಅಪ್ರಾಪ್ತರನ್ನ ಕರೆತಂದು ಮೊಬೈಲ್ ಕಳ್ಳತನಕ್ಕೆ ಬಿಟ್ಟಿರುವುದು ಗೊತ್ತಾಗಿದೆ. ಬೆಂಗಳೂರಲ್ಲದೇ ಚೆನ್ನೈ, ಮುಂಬೈ, ಕೋಲ್ಕತ್ತಾಗೆ ಹೋಗಿ ಸಾಕಷ್ಟು ಕಡೆಗಳಲ್ಲಿ ಈ ಗ್ಯಾಂಗ್ ಕೈಚಳಕ ತೋರಿದೆ. ಇದೀಗ ಬಂಧಿತರ ಸಂಖ್ಯೆ ಅಪ್ರಾಪ್ತರು ಸೇರಿದಂತೆ 13 ಕ್ಕೆ ಏರಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ನಡುವೆ ಭಾನುವಾರ ಎಂ.ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿರುವ ಹೈ–ವೋಲ್ಟೇಜ್ ಐಪಿಎಲ್ ಪಂದ್ಯಕ್ಕೆ ಭದ್ರತೆ ವಹಿಸುವ ಕುರಿತು ಅಧಿಕಾರಿಗಳ ಸಭೆ ನಡೆಸಿ, ಅಗತ್ಯವಿರುವ ಕಡೆಗಳಲ್ಲಿ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

ನಮ್ಮ ಮೆಟ್ರೋ ಸೇವೆಯಿಂದ ಸಹಕಾರಿಯಾಗಿದ್ದು, ಕಬ್ಬನ್ ಪಾರ್ಕ್ ಮತ್ತು ಎಂ.ಜಿ.ರೋಡ್ ನಿಲ್ದಾಣಗಳಲ್ಲಿ ಜನಸಂದಣಿ ನಿರ್ವಹಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಬಿಎಂಟಿಸಿ ವತಿಯಿಂದ ಶಟಲ್ ಬಸ್ ಮತ್ತು ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಮಾಡುವಂತೆ ವಿನಂತಿಸಲಾಗಿದೆ. ಕ್ವೀನ್ಸ್ ರೋಡ್, ಕಬ್ಬನ್ ರೋಡ್, ಲಿಂಕ್ ರೋಡ್ ಮತ್ತು ಎಂ.ಜಿ. ರೋಡ್‌ಗಳಲ್ಲಿ ಸಂಚಾರ ದಟ್ಟಣೆ ತಪ್ಪಿಸಲು ಸಾರ್ವಜನಿಕರು ಸಹಕರಿಸಬೇಕು. ಟಿಕೆಟ್ ಇದ್ದವರು ಮಾತ್ರ ಕ್ರೀಡಾಂಗಣದತ್ತ ಬರಬೇಕು ಮತ್ತು ನಿಗದಿತ ಸಮಯಕ್ಕೆ ಮುಂಚಿತವಾಗಿ ಬಂದು 'ಹೋಲ್ಡಿಂಗ್ ಏರಿಯಾ' ಬಳಸಿಕೊಳ್ಳಬೇಕು. ಟಿಕೆಟ್ ಇಲ್ಲದವರು ರಸ್ತೆಯಲ್ಲಿ ನಿಂತು ಸಂಚಾರಕ್ಕೆ ಅಡ್ಡಿಪಡಿಸಬಾರದು. ಅಂತಹವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದ್ದಾರೆ.

ಒಂದು ತಂಡವಾಗಿ ಜನಗಣತಿ ನಿರ್ವಹಿಸಿ

ಬೆಂಗಳೂರು: ರಾಷ್ಟ್ರೀಯ ಜನಗಣತಿ–2027 ರ ಕಾರ್ಯವನ್ನು ಅಧಿಕಾರಿಗಳು ಹಾಗೂ ಸಿಬ್ಬಂದಿ ಒಂದು ತಂಡವಾಗಿ ಕಾರ್ಯ ನಿರ್ವಹಿಸಿ ಎಂದು ಅಧಿಕಾರಿಗಳಿಗೆ ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಸೂಚನೆ ನೀಡಿದರು.

ಜನಗಣತಿ ಕಾರ್ಯಕ್ಕೆ ನೇಮಿಸಲಾದ ಸಿಬ್ಬಂದಿಗೆ ಆಯೋಜಿಸಿದ್ದ ಸಭೆಯನ್ನು ಉದ್ದೇಶಿಸಿ ಮಾತನಾಡಿ, ಎಲ್ಲಾ ವಿಭಾಗಗಳ ಅಧಿಕಾರಿ/ಸಿಬ್ಬಂದಿ ಜನಗಣತಿ ಕಾರ್ಯವನ್ನು ಒಂದು ತಂಡವಾಗಿ ಕಾರ್ಯ ನಿರ್ವಹಿಸಿ, ಯಾವುದೇ ಲೋಪದೋಷಗಳಿಗೆ ಅವಕಾಶ ನೀಡದಂತೆ ಕರ್ತವ್ಯ ನಿರ್ವಹಿಸಬೇಕು ಎಂದು ಸೂಚನೆ ನೀಡಿದರು.

ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ರಾಷ್ಟ್ರೀಯ ಜನಗಣತಿ–2027 ಕ್ಕೆ ಗಣತಿಗೆ ನೇಮಿಸಲು ತರಬೇತಿಗೆ ಹಾಜರಾಗುವ ವಿವಿಧ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗೆ ತರಬೇತಿ ನೀಡಲು 6 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ 6 ಕೇಂದ್ರಗಳನ್ನು ಗುರುತಿಸಲಾಗಿದೆ ಎಂದರು.

ಬೈಕ್ ಟಚ್ ನೆಪ: ಬರ್ಬರ ಕೊಲೆ

ಬೆಂಗಳೂರು: ಕ್ಷುಲ್ಲಕ ಕಾರಣಕ್ಕೆ ಯುವಕನ ಬರ್ಬರ ಹತ್ಯೆ ಮಾಡಿರುವ ಆಘಾತಕಾರಿ ಘಟನೆ ಜೆ.ಸಿ.ನಗರದ ಮುಖ್ಯರಸ್ತೆಯಲ್ಲಿ ನಡೆದಿದೆ. 22 ವರ್ಷದ ವಿಜಯ್ ಕೊಲೆಯಾದ ವ್ಯಕ್ತಿಯಾಗಿದ್ದು, ಮಧ್ಯಾಹ್ನ 12 ಗಂಟೆ ಸುಮಾರಿಗೆ ವಿಜಯ್‌ಗೆ ಚಾಕು ಇರಿದು ದುಷ್ಕರ್ಮಿಗಳು ಹತ್ಯೆ ಮಾಡಿದ್ದಾರೆ. ಆರೋಪಿಗಳಾದ ಕಿರಣ್ ಮತ್ತು ವಿನೋದ್ ಎಂಬವರನ್ನು ಪೊಲೀಸರು ವಶಕ್ಕೆ ಪಡೆದಿದ್ದು, ತನಿಖೆ ಮುಂದುವರಿದಿದೆ.

ಶುಕ್ರವಾರ ರಾತ್ರಿ ಕುಡಿದು ಹೋಗುವಾಗ ವಿಜಯ್ ಬೈಕ್‌ಗೆ ವಿನೋದ್ ಗಾಡಿ ಟಚ್ ಆಗಿತ್ತು. ಇದೇ ವಿಚಾರವಾಗಿ ಗಲಾಟೆ ಕೂಡ ನಡೆದಿತ್ತು. ವಿಷಯ ಅಲ್ಲಿಗೆ ಬಿಡದೆ ಶನಿವಾರ ಬೆಳಗ್ಗೆ ವಿಜಯ್ ಹುಡುಕಿಕೊಂಡು ಆರೋಪಿಗಳಾದ ಕಿರಣ್ ಮತ್ತು ವಿನೋದ್ ಹೋಗಿದ್ದರು. ಮನೆ ಬಳಿ ತೆರಳಿದ್ದಾಗ ವಿಜಯ್ ಸಿಗದಿದ್ದರಿಂದ ಫೋನ್ ಮಾಡಿ ಆತನನ್ನು ಮತ್ತೆ ಬಾರ್ ಬಳಿಗೆ ಕರೆಸಿಕೊಂಡಿದ್ದರು. ವಿಜಯ್ ಸ್ಥಳಕ್ಕೆ ಬರುತ್ತಿದ್ದಂತೆ ಗಲಾಟೆ ಶುರುಮಾಡಿದ್ದು, ಈ ವೇಳೆ ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ. ವಿಜಯ್ ಹೊಟ್ಟೆಗೆ ಚಾಕು ಇರಿಯಲಾಗಿದ್ದು, ತೀವ್ರ ರಕ್ತಸ್ರಾವವಾಗಿ ಆತ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಇನ್ನು ಘಟನಾ ಸ್ಥಳಕ್ಕೆ ಜೆ.ಸಿ.ನಗರ ಠಾಣೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಹಿಂದಿನಿಂದಲೂ ಇತ್ತು ದ್ವೇಷ: ಪ್ರಕರಣ ಸಂಬಂಧ ಸ್ಫೋಟಕ ಮಾಹಿತಿ ಬೆಳಕಿಗೆ ಬಂದಿದ್ದು, ಬೈಕ್ ಟಚ್ ಆದ ವಿಚಾರ ಕೊಲೆಗೆ ಕೇವಲ ಪ್ರಚೋದನೆ ಮಾತ್ರ. ಹುಡುಗಿ ವಿಚಾರಕ್ಕೆ ಸಂಬಂಧಿಸಿ ಆರೋಪಿ ಕಿರಣ್ ಮತ್ತು ವಿಜಯ್ ನಡುವೆ ಹಿಂದಿನಿಂದಲೂ ದ್ವೇಷವಿತ್ತು. ವಿಜಯ್‌ಗೆ ಅದಾಗಲೇ ಮದುವೆಯಾಗಿದ್ದರೂ ಮಾಜಿ ಪ್ರೇಯಸಿಗೆ ಕಾಟ ನೀಡುತ್ತಿದ್ದ. ಆಕೆ ಈಗ ಕಿರಣ್ ಪ್ರಿಯತಮೆ ಆಗಿದ್ದು, ಇದೇ ಕಾರಣಕ್ಕೆ ವಿಜಯ್ ಮೇಲೆ ಕಿರಣ್‌ಗೆ ಕೋಪ ಇತ್ತು. ಹೀಗಾಗಿ ನಿನ್ನೆ ರಾತ್ರಿಯ ಗಲಾಟೆ ನೆಪದಲ್ಲಿ ಅಟ್ಯಾಡಿಸಿ ವಿಜಯ್‌ನ ಆರೋಪಿಗಳು ಕೊಲೆ ಮಾಡಿದ್ದಾರೆ ಎಂಬ ಮಾತುಗಳು ಕೇಳಿಬಂದಿವೆ.

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ–1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು–560001
ದೂ: 080–25310066, ಇ–ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ–ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು** ರವರು ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 24.04.2026, ಬೆಳಿಗ್ಗೆ 10.00 ರಿಂದ ಬೆಳಿಗ್ಗೆ 11.00 ರವರೆಗೆ** [ಮಾರಾಟ ಮುಗಿಯುವವರೆಗೆ ತಲಾ 5 ನಿಮಿಷಗಳ ಅವಧಿಯನ್ನು ಅನಿಯಮಿತವಾಗಿ ವಿಸ್ತರಿಸಲಾಗಿದೆ.] ರಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 91,96,604.66 (ರೂಪಾಯಿ ತ್ತೊಂಭತ್ತು ಲಕ್ಷದ ತೊಂಭತ್ತಾರು ಸಾವಿರದ ಆರುನೂರ ನಾಲ್ಕು ಮತ್ತು ಅರವತ್ತಾರು ಪೈಸೆ ಮಾತ್ರ) ಜೊತೆಗೆ ದಿನಾಂಕ: 03.04.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ.

ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು ರವರಿಂದ ಸಾಲಗಾರರಾದ: **(1) ಕುಮಾರಿ ಸುಸ್ಮಿತಾ ಕಾಶಿಮಲ್ಲ ಎಂ** D/o ವೀರ ಬ್ರಹ್ಮ, ನಂ.36, 2ನೇ ಕ್ರಾಸ್, ಅಂಬೇಡ್ಕರ್ ಪ್ರತಿಮೆ ಹತ್ತಿರ, ಹೊಸ ತಿಪ್ಪಸಂದ್ರ, ಬೆಂಗಳೂರು ಉತ್ತರ, ಬೆಂಗಳೂರು–560075, **(2) ಶ್ರೀಮತಿ. ಲಿದ್ಯ ಕರೆನ್ ಕೆ** D/o ವೀರ ಬ್ರಹ್ಮ, ನಂ.36, 2ನೇ ಕ್ರಾಸ್, ಆನಂದ ಪುರಂ, ಕಲ್ಯಾಣ ಮಂಡಪಜೀವನ ಭೀಮಾ ನಗರ, ಹೊಸ ತಿಪ್ಪಸಂದ್ರ, ಬೆಂಗಳೂರು–560075, ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 23.04.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು. (₹. ಲಕ್ಷಗಳಲ್ಲಿ)

ಕ್ರ. ಸಂ	ಸ್ಥಿರಾಸ್ತಿ/ಚರಾಸ್ತಿಗಳ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ	ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ
1	**ಷೆಡ್ಯೂಲ್ ಆಸ್ತಿ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯ ವಾಸಯೋಗ್ಯ ಫ್ಲಾಟ್‌ನ ನಂ. ಎಫ್‌ಎಫ್–1, 1ನೇ ಮಹಡಿ, "ಅರಿಹಂತ್ ಎಂಎಸ್‌ಆರ್ ನೀಪಾ" ಎಂದು ಕರೆಯಲ್ಪಡುವ ವಾಸಯೋಗ್ಯ ಅಪಾರ್ಟ್‌ಮೆಂಟ್‌ನ ಸೂಪರ್ ಬಿಲ್ಟ್ ಅಪ್ ಪ್ರದೇಶ 1400 ಚದರ ಅಡಿ ಜೊತೆಗೆ 240 ಚದರ ಅಡಿ ಅವಿಭಾಜಿತ ಭಾಗವನ್ನೊಳಗೊಂಡಿರುವ ಭೂಮಿಯಾಗಿದ್ದು ಜೊತೆಗೆ ಪಾರ್ಕಿಂಗ್‌ನ್ನು ಒಳಗೊಂಡಿದೆ, ಈ ಆಸ್ತಿಯು ರಾಮಯ್ಯ ಗಾರ್ಡನ್, ಬಿಗ್ ಮಾರ್ಕೆಟ್ ಹತ್ತಿರ, ಜೆ ಪಿ ನಗರ, 7ನೇ ಹಂತ, ಬೆಂಗಳೂರು–560078, ಹೊಸ ಪಿಐಡಿ ನಂ.187/W0157–5,6, ಪುಟ್ಟೇನಹಳ್ಳಿ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣದಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ : ಸ್ವತ್ತಿನ ನಿವೇಶನ ನಂ. 41 & 42, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಸ್ವತ್ತಿನ ನಂ. 33, ದಕ್ಷಿಣಕ್ಕೆ : ನಿವೇಶನ ನಂ. 36. **Coordinates of the described property; - 12.897098 N, 77.585003 E**	₹. 50.00	₹. 5.00	₹. 1.00	18.04.2026 ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 2.00ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧರಿತದಂತೆ

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ–ಹರಾಜು'ಲಿಂಕ್ ಪ್ರೊವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ–I ಶಾಖೆ, ಬೆಂಗಳೂರು (ಮೊಬೈಲ್ ಸಂಖ್ಯೆ: 9439058121 ಮತ್ತು 9483544116)** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 04.04.2026
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ–1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು–560001
ದೂ: 080–25310066, ಇ–ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ–ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು** ರವರು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 23.04.2026 (ಬೆಳಿಗ್ಗೆ 10.00 ರಿಂದ ಬೆಳಿಗ್ಗೆ 11.00 ರವರೆಗೆ)** ರಂದು ಸ್ವತ್ತನ್ನು **"ಹೇಗಿದೆಯೋ ಹಾಗೆ", "ಏನಿದೆಯೊ ಹಾಗೆ", ಏನೇ ಇದ್ದರೂ",** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 28,26,55,996.82 (ರೂಪಾಯಿ ಇಪ್ಪತ್ತೆಂಟು ಕೋಟಿ ಇಪ್ಪತ್ತಾರು ಲಕ್ಷದ ಐವತ್ತೈದು ಸಾವಿರದ ಒಂಭೈನೂರ ತೊಂಭತ್ತಾರು ಮತ್ತು ಎಂಭತ್ತೆರಡು ಪೈಸೆ ಮಾತ್ರ)** ಜೊತೆಗೆ ಹೆಚ್ಚಿನ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: **(1) ಮೆ॥ ಬಯೋಪಾಯಿಂಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, (2) ಶ್ರೀ ಅನಿಕೇತನ ಯುಪಿ ವ್ಯವಸ್ಥಾಪಕ ನಿರ್ದೇಶಕರು, (3) ಶ್ರೀಮತಿ ಅಮೂಲ್ಯ ಎನ್ ಎಸ್ ನಿರ್ದೇಶಕರು, (4) ಶ್ರೀಮತಿ ಆರ್ ಮಂಜುಳಾ, ಇವರೆಲ್ಲರ ವಿಳಾಸ :** # 502, 12ನೇ ಮುಖ್ಯ ರಸ್ತೆ, ಎಂ ಎಸ್ ಆರ್ ಎನ್‌ಕ್ಲೇವ್, ನಾಗಸಂದ್ರ ಮೆಟ್ರೋ ನಿಲ್ದಾಣದ ಹತ್ತಿರ, ನಾಗಸಂದ್ರ, ಬೆಂಗಳೂರು–560073. **(5) ಶ್ರೀಮತಿ ಅನನ್ಯ ಯು ಪಿ,** ನಂ. ಎಸ್ 3, 2ನೇ ಮಹಡಿ, ಡೆಕ್ಕನ್ ಟೆರೇಸ್ 8ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–5600036. **(6) ಶ್ರೀ ಬಿ ಆರ್ ಸಿದ್ದೇಶ್,** ನಂ.3163, 10ನೇ ಮುಖ್ಯ ರಸ್ತೆ, 3ನೇ ಅಡ್ಡ ರಸ್ತೆ, ಎಂಸಿಸಿ ಬ್ಲಾಕ್, ದಕ್ಷಿಣ ವಿಭಾಗ, ದಾವಣಗೆರೆ–577004. **(7) ಶ್ರೀ ಕೆ ಎನ್ ಉಮೇಶ್,** # 502, 12ನೇ ಮುಖ್ಯ ರಸ್ತೆ, ಎಂ ಎಸ್ ಆರ್ ಎನ್‌ಕ್ಲೇವ್, ನಾಗಸಂದ್ರ ಮೆಟ್ರೋ ನಿಲ್ದಾಣದ ಹತ್ತಿರ, ನಾಗಸಂದ್ರ, ಬೆಂಗಳೂರು–560073. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 22.04.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು. (₹. ಲಕ್ಷಗಳಲ್ಲಿ)

ಕ್ರ. ಸಂ	ಸ್ಥಿರಾಸ್ತಿ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ	ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ
1	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಪರಿವರ್ತಿತ ಭೂಮಿಯ ಸರ್ವೆ ನಂ.26/8, ವಿಸ್ತೀರ್ಣ 2 ಎಕರೆಗಳು 35 ಗುಂಟೆಗಳು, ಈ ಆಸ್ತಿಯು ಮೇಟಿಕುರ್ಕೆ ಗ್ರಾಮ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆಯಲ್ಲಿದ್ದು, ಮೆ॥ ಬಯೋಪಾಯಿಂಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಅವರ ಹೆಸರಿನಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಎಲ್‌ಎ ನಂ.31, ಪಶ್ಚಿಮಕ್ಕೆ: ಬಿ ತಿಪ್ಪಮ್ಮ ರವರ ಭೂಮಿ, ಉತ್ತರಕ್ಕೆ: ಎಲ್‌ಎ ನಂ.276ರ ಭೂಮಿ, ದಕ್ಷಿಣಕ್ಕೆ: ಎಲ್‌ಎ–ಹೆಚ್‌ಐ 2ರ ಭೂಮಿ.	ರೂ. 3080.00	ರೂ. 308.00	ರೂ. 10.00	10.03.2026 ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 2.00 ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧರಿತದಂತೆ
2	Hypothecated Plant & Machinery, Furniture & Fixtures and DG set				

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ–ಹರಾಜು'ಲಿಂಕ್ ಪ್ರೊವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ–I ಶಾಖೆ, ಬೆಂಗಳೂರು** ಮೊಬೈಲ್ ಸಂಖ್ಯೆ: **080–25310066 ಮತ್ತು 9483544116, e-mail: cb2366@canarabank.com** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 04.04.2026
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

बैंक ऑफ़ Bank of Baroda

ROSARB
ಪ್ರಾದೇಶಿಕ ಕಚೇರಿ, ಬೆಂಗಳೂರು ಉತ್ತರ
ನಂ.41/2, 4ನೇ ಮಹಡಿ, ವಿಜಯ ಟವರ್ಸ್, ಟ್ರಿನಿಟಿ ಸರ್ಕಲ್, ಎಂ ಜಿ ರಸ್ತೆ, ಬೆಂಗಳೂರು, ಕರ್ನಾಟಕ–560001.
ದೂರವಾಣಿ ಸಂಖ್ಯೆ: 080–25011567, ಇ–ಮೇಲ್: sarben@bankofbaroda.com, Web: www.bankofbaroda.com

ಸಂಕ್ಷಿಪ್ತ ವಾಹನದ ಇ–ಹರಾಜು ಸೂಚನೆ

ಚಲನಶೀಲ ಆಸ್ತಿಗಳು/ವಾಹನಗಳ ಮಾರಾಟಕ್ಕಾಗಿ ಇ–ಹರಾಜಿಗಾಗಿ ಸಾರ್ವಜನಿಕ ಸೂಚನೆ

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಅಡಮಾನುದಾರರಿಗೆ/ ಜಾಮೀನುದಾರರಿಗೆ ಹಾಗೂ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಹೈಪೋಥೆಕೇಶನ್/ಸಾಲ ಒಪ್ಪಂದದ ಅಡಿಯಲ್ಲಿ ನೀಡಲಾದ ಅಧಿಕಾರಗಳನ್ನು ಚಲಾಯಿಸಿ, ಕೆಳಗೆ ತಿಳಿಸಲಾದ ಹೈಪೋಥೆಕೇಟೆಡ್ ಮೋಟಾರು ವಾಹನವನ್ನು ಬ್ಯಾಂಕ್ ಮರು ಸ್ವಾಧೀನಪಡಿಸಿಕೊಂಡಿದೆ/ ವಶಪಡಿಸಿಕೊಂಡಿದೆ ಮತ್ತು ವಾಹನವನ್ನು **"ಎಲ್ಲಿ ಹೇಗಿದೆಯೋ ಹಾಗೆ" "ಎಲ್ಲಿ ಏನಿದೆಯೋ ಹಾಗೇ ಆಧಾರದ ಮೇಲೆ"** ಮಾರಾಟ ಮಾಡಲಾಗುವುದು. ಸಾಲಗಾರರ / ಜಾಮೀನುದಾರರ /ಅಡಮಾನದಾರರ ವಾಹನ/ಬಾಕಿ ಮೊತ್ತ / ಮೀಸಲು ಬೆಲೆ / ಹರಾಜಿನ ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಗುಣಾಂಕಗಳನ್ನು ಕೆಳಗೆ ವಿವರಿಸಿದೆ.

ಕ್ರ. ಸಂ	ಸಾಲಗಾರ/ ಜಾಮೀನುದಾರರ ಹೆಸರು ಮತ್ತು ವಿಳಾಸ ಸಾಲದ ಖಾತೆ ಸಂಖ್ಯೆ, ಒಟ್ಟು ಮೊತ್ತ	ವಾಹನ ಮೇಕ್ ಮತ್ತು ಮಾದರಿ ಆರ್‌ಟಿಒ ನೋಂದಣೆ ನಂ./ಎಂಜಿನ್ ನಂ./ಚಾಸಿಸ್ ನಂ.	1 ಮೀಸಲು ಬೆಲೆ, 2. ಇ.ಎಂ.ಡಿ 3. ಕನಿಷ್ಠ ಇನ್ಕ್ರಿಮೆಂಟ್ ಮೌಲ್ಯ	1. ಇ–ಹರಾಜಿನ ದಿನಾಂಕ ಇ–ಹರಾಜಿನ ಪ್ರಾರಂಭದ ಸಮಯದಿಂದ ಕೊನೆಯ ಸಮಯ 2. ಬಿಡ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ. 3.ವಾಹನ / ಚರಾಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ
1	**ಸಿ ಗಂಗಾಧರ್** ಸಂಖ್ಯೆ 5 ಎಲ್ಲುಮಾಡ ಲೇಔಟ್, ರಾಮಚಂದ್ರ ಪುರಂ, ಜಾಲಹಳ್ಳಿ, ಬೆಂಗಳೂರು 560013 89590600003610 ರೂ 23,74,670.04	2021/TATA ULTRA 1918 T 5L BSVI TEMP REG NO. T0422KA7311X/ MAT790213N7B03949/ 5LNGDICR21BXX504565	1.ರೂ.7,40,000/– 2.ರೂ.74,000/– 3.ರೂ.5,000/–	1. Date of e-Auction 21.04.2026 Time of E-auction - Start Time 02:00 PM to End Time 06:00 PM. 2. Last date and time of submission of Bid. 21.04.2026 02:00 PM. 3. Inspection : With prior permission from authorised officer (All vehicles are at Bhiwadi, Rajasthan)
2	**ಸುರೇಶ್ ಎಂ** ನಂ 5 ಎಲ್ಲುಮಾಡ ಲೇಔಟ್, ನಳಂದ ಥಿಯೇಟರ್ ಹತ್ತಿರ, ರಾಮಚಂದ್ರ ಪುರಂ, ಜಾಲಹಳ್ಳಿ ಬೆಂಗಳೂರು–560013 89590600003605 ರೂ 26,04,679.84	2021/TATA ULTRA 1918 T 5L BSVI TEMP REG NO. T0222KA33002/MAT790213M7K17147/5LNGDICR21KYX520358	1.ರೂ.7,40,000/– 2.ರೂ.74,000/– 3.ರೂ.5,000/–	
3	**ವಸಂತ್.ಎಸ್** ಸಂಖ್ಯೆ 63 ಸಿ ಲೇನ್, ಅಂಜನಪ್ಪ ಗಾರ್ಡನ್, ಮೈಸೂರು ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018 89590600003432 ರೂ 25,27,911.61	2021TATA ULTRA 1918 T 5L BSVI TEMP REG NO/ MAT790213M7J16050/5LNGDICR21JYX518867	1.ರೂ.7,40,000/– 2.ರೂ.74,000/– 3.ರೂ.5,000/–	
4	**ರವೀಂದ್ರ ಎ** ನಂ.43, 2ನೇ ಮಹಡಿ, 4ನೇ ಕ್ರಾಸ್, ನಂದಿನಿ ಥಿಯೇಟರ್ ಹತ್ತಿರ, ಹೂವಿನ ಉದ್ಯಾನ, ಮೈಸೂರು ರಸ್ತೆ, ಬೆಂಗಳೂರು 560018 89590600003713 ರೂ 26,14,558.78	2021/TATA ULTRA 1918 T 5L BSVI TEMP REG NO/ MAT790213N7C07240/5JNGDICR21CXX508514	1.ರೂ.7,40,000/– 2.ರೂ.74,000/– 3.ರೂ.5,000/–	
5	**ವೆಂಕಟೇಶ್** ಸಂಖ್ಯೆ 38/3, ಮುನೇಶ್ವರ ಬ್ಲಾಕ್, 1 ನೇ ಮುಖ್ಯ ರಸ್ತೆ, ನಾಗಶೆಟ್ಟಿಹಳ್ಳಿ, ಬೆಂಗಳೂರು–560094 89590600003714 ರೂ 26,36,830.49	2021/TATA ULTRA 1918 T 5L BSVI TEMP REG NO. T0422KA7309X/ MAT790213N7C07711/5LNGDICR21CXY507693	1.ರೂ.7,40,000/– 2.ರೂ.74,000/– 3.ರೂ.5,000/–	
6	**ಲೋಕನಾಥ್ ಸಿ** ಸಂಖ್ಯೆ 8, ಕ್ವೀನ್ಸ್ ರಸ್ತೆ, ರಾಜೀವ್ ಗಾಂಧಿ ಕಾಲೋನಿ, ಪಶುವೈದ್ಯಕೀಯ ಆಸ್ಪತ್ರೆ ಹತ್ತಿರ, ಶಿವಾಜಿನಗರ, ಬೆಂಗಳೂರು 560051 89590600003519 ರೂ 25,26,857.43	2021/TATA ULTRA 1918 T 5L BSVI TEMP REG NO/ MAT790213M7J16044/ 5LNGDICR21JYX519196	1.ರೂ.7,40,000/– 2.ರೂ.74,000/– 3.ರೂ.5,000/–	

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು **https://baanknet.com** ವೆಬ್‌ಸೈಟ್ ಲಿಂಕ್‌ಗಳನ್ನು ನೋಡಿ/ಭೇಟಿ ನೀಡಿ. ನಿರೀಕ್ಷಿತ ಬಿಡ್‌ದಾರರು **ಶ್ರೀ ಪ್ರಭೀಶ್ ಎನ್ ಕೆ** ಟೆಲಿಫೋನ್ ನಂ.**08025584066** ದೂರವಾಣಿ ಸಂಖ್ಯೆ **8866556911** ನಲ್ಲಿ ಸಂಪರ್ಕಿಸಬಹುದು.

ದಿನಾಂಕ : 04.04.2026
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿಗಳು
ಬ್ಯಾಂಕ್ ಆಫ್ ಬರೋಡ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರಾದ **ಶ್ರೀ. ಮಹೇಂದ್ರ ರೆಡ್ಡಿ ಮತ್ತು ಅವರ ಪತ್ನಿ ಶ್ರೀಮತಿ ಅಲಿಲಾವತಿ** ಇವರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ಥಿರಾಸ್ತಿಯ ಮಾಲೀಕರಾಗಿದ್ದು ಇವರು ಮೂಲ ಮಾರಾಟ ಪತ್ರ ದಿನಾಂಕ: 4.3.2004 ದಾಖಲೆ ಸಂಖ್ಯೆ.25018/03–04, ಪುಸ್ತಕ–1, ಶ್ರೀ. ರಾಮಚಂದ್ರಯ್ಯ.ಪಿ.ಎಂ ಅವರ ಪರವಾಗಿ ಶ್ರೀಮತಿ ಪದ್ಮಾವತಿ ಅಲಿಯಾಸ್ ಪದ್ಮಾವತಮ್ಮ ಅವರು ಬರೆದಿದ್ದಾರೆ ಮತ್ತು ಮಾರಾಟ ಪತ್ರ ದಿನಾಂಕ: 21/2/2005 ದಾಖಲೆ ಸಂಖ್ಯೆ.29574/04–05, ಪುಸ್ತಕ–1, ಶ್ರೀ. ರಾಮಚಂದ್ರಯ್ಯ.ಪಿ.ಎಂ ಅವರು ಶ್ರೀ.ವಿ.ಶ್ರೀನಿವಾಸ ರೆಡ್ಡಿ ಅವರ ಪರವಾಗಿ ಬರೆದಿದ್ದಾರೆ, ಇವರೂ ಬೆಂಗಳೂರು ದಕ್ಷಿಣ ತಾಲ್ಲೂಕಿನ SRO, ನಲ್ಲಿ ನೋಂದಾಯಿಸಲಾಗಿದೆ ಮತ್ತು ಡಿಸ್ಚಾರ್ಜ್ ಪತ್ರ ದಿನಾಂಕ: 6/8/2018 ದಾಖಲೆ ಸಂಖ್ಯೆ.2670 /18–19, ಶ್ರೀ. ಮಹೇಂದ್ರ ರೆಡ್ಡಿ ಮತ್ತು ಶ್ರೀಮತಿ.ಲೀಲಾವತಿ ಅವರ ಪರವಾಗಿ ರಾಷ್ಟ್ರೀಯ ಸಹಕಾರ ಬ್ಯಾಂಕ್‌ನಿಂದ ಬರೆದಿದ್ದಾರೆ, SRO ವರ್ತೂರು ಬೆಂಗಳೂರಿನಲ್ಲಿ ನೋಂದಾಯಿಸಲಾಗಿದೆ. ಮತ್ತು ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಾದರೂ ಸ್ವತ್ತಿನ ಮೇಲೆ ಸ್ವಾಧೀನವನ್ನು ಹೊಂದಿದ್ದರೆ, ಅದನ್ನು ಈ ದಿನಾಂಕದಿಂದ ನೋಟೀಸು ಪ್ರಕಟವಾದ ಏಳು ದಿನಗಳ ಒಳಗಾಗಿ ಕೆಳಸಹಿದಾರರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತು

ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಮುನೇನೊಳಲ ಗ್ರಾಮದ ಎಸ್‌ಜಿಆರ್ ಕಾಲೇಜಿನ ಪಕ್ಕದ ರಸ್ತೆಯಲ್ಲಿರುವ ಸ್ಥಿರ ಆಸ್ತಿ ನಿವೇಶನ ಸಂಖ್ಯೆ.116/5ಎ, ಹಳೆಯ ಮಹದೇವಪುರ ಸಿಎಂಸಿ ಖಾತಾ ಸಂಖ್ಯೆ.116/5ಎ, ಈಗ ಹೊಸ ಬಿಬಿಎಂಪಿ ಫಾರ್ಮ್–ಬಿ ಕ್ರಮ ಸಂಖ್ಯೆ.202,ರ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 55 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 56 ಅಡಿ, ಒಟ್ಟು 3080 ಚದರ ಅಡಿ. ಈ ಸ್ವತ್ತಿಗೆ ಚಕ್ಕುಬಂದಿ:– ಪೂರ್ವಕ್ಕೆ : ಪಾಪಯ್ಯ ರೆಡ್ಡಿ ಅವರಿಗೆ ಸೇರಿದ ಆಸ್ತಿ, ಪಶ್ಚಿಮಕ್ಕೆ : ವೆಂಕಟಮ್ಮ ಅವರಿಗೆ ಸೇರಿದ ದಾರಿ ಮತ್ತು ಆಸ್ತಿ, ಉತ್ತರಕ್ಕೆ : ಜಯರಾಮ ರೆಡ್ಡಿ ಅವರಿಗೆ ಸೇರಿದ ಆಸ್ತಿ, ದಕ್ಷಿಣಕ್ಕೆ : ಎ.ನಾರಾಯಣ ರೆಡ್ಡಿ ಅವರಿಗೆ ಸೇರಿದ ಆಸ್ತಿ.

ಎನ್. ಜಗದೀಶ್ ಕುಮಾರ್, ವಕೀಲರು
ನಂ.30/1, 2ನೇ ಮಹಡಿ, 7ನೇ ಕ್ರಾಸ್,
ಎನ್.ಆರ್. ಕಾಲೋನಿ ಹತ್ತಿರ ಬಸ್ ನಿಲ್ದಾಣ,
ಹೋಟೆಲ್ ದ್ವಾರಕ ಎದುರು, ಬೆಂಗಳೂರು–560019.

ಗೌರವಾನ್ವಿತ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 196/2026

ಅರ್ಜಿದಾರರು : ಶ್ರೀ ಸಾಬುಲಾಲ್ ಬಿನ್ ಲೇಟ್ ಬಾಜಿಸಾಬ್ @ ಮೊಹಮದ್ ಉಸ್ಮಾನ್ ವಯಸ್ಸು 87 ವರ್ಷ, ವಾಸ: ಕುರುಪೇಟೆ ಕನಕಪುರ ಟೌನ್, ಬೆಂಗಳೂರು ದಕ್ಷಿಣ ಜಿಲ್ಲೆ. ಹಾಲಿ ವಾಸ: # 1988, 3ನೇ ತಿರುವು, 20ನೇ ಮುಖ್ಯ ರಸ್ತೆ, ಜೆ.ಪಿ. ನಗರ, 2ನೇ ಹಂತ, ಬೆಂಗಳೂರು ದಕ್ಷಿಣ ಬೆಂಗಳೂರು –560078.

ವಿರುದ್ಧ

ಪ್ರತಿ ಅರ್ಜಿದಾರರು : ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ಪ್ರತಿನಿಧಿಸುವವರ, ಪೌರಾಯುಕ್ತರು ನಗರಸಭೆ ಕನಕಪುರ ಟೌನ್ ಬೆಂಗಳೂರು ದಕ್ಷಿಣ

ಪ್ರಕಟಣೆ

ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ಅಕ್ಕ ರವರು ಆದ ರಮೀಜಾಬಿ ಕೋಂ ಲೇಟ್ ಅಹಮದ್ ಷರೀಫ್ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ಟೌನ್, ಕುರುಪೇಟೆಯಲ್ಲಿ ದಿನಾಂಕ : 03–01–1950 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿ ಪಡಿಸಿದ ದಿನಾಂಕದಂದು ಅಂದರೆ, 16/05/2026 ರ ಬೆಳಿಗ್ಗೆ 11:00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2026ರ ಏಪ್ರಿಲ್ 02ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ದೀಪಕ್.ಕೆ., ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 02/04/2026

ಮಾನ್ಯ ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ.879/2025

ಅರ್ಜಿದಾರರು : ಶ್ರೀಮತಿ ಗೌರಮ್ಮ ಬಿನ್ ಲೇಟ್ ಈರಭದ್ರೇಗೌಡ @ ವೀರಭದ್ರಗೌಡ ಅಜ್ಜೇಗೌಡನ ವಲಸೆ ಗ್ರಾಮ ಮರಳವಾಡಿ ಹೋಬಳಿ. ಹಾರೋಹಳ್ಳಿ ತಾಲೂಕು. ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು : 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ಹಾರೋಹಳ್ಳಿ ತಹಶೀಲ್ದಾರ್, ಹಾರೋಹಳ್ಳಿ ತಾಲ್ಲೂಕು ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು 2. ಗ್ರಾಮ ಲೆಕ್ಕಾಧಿಕಾರಿಗಳು, ಅಜ್ಜೇಗೌಡನ ವಲಸೆ ವೃತ್ತ, ಮರಳವಾಡಿ ಹೋಬಳಿ ಹಾರೋಹಳ್ಳಿ ತಾಲೂಕು. ಬೆಂಗಳೂರು ದಕ್ಷಿಣ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಮೂಲಕ ತಿಳಿಯಪಡಿಸುವುದೇನೆಂದರೆ, 1,2 ಮತ್ತು 6ನೇ ಅರ್ಜಿದಾರರ ತಾಯಿ ಮತ್ತು 3ನೇ ಅರ್ಜಿದಾರರ ಅತ್ತೆ, 4 ಮತ್ತು 5ನೇ ಅರ್ಜಿದಾರರ ಅಜ್ಜಿಯವರಾದ ಶ್ರೀಮತಿ ದೇವಮ್ಮ ಕೋಂ ಲೇಟ್ ಈರಭದ್ರೇಗವಡ @ ವೀರಭದ್ರಗೌಡ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ಅಜ್ಜೇಗೌಡನ ವಲಸೆ ಗ್ರಾಮ ದಿನಾಂಕ: 05/03/2011 ರಂದು ಮರಣ ಹೊಂದಿರುತ್ತಾರೆ, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಅಗತ್ಯ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗದಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ:. 29/04/2026 ರ ಬೆಳಿಗ್ಗೆ ಸರಿಯಾಗಿ 11–00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2026ರ 26/03/2026 ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಸಿದ್ದಾರ್ಥ, ವಕೀಲರು, ಕನಕಪುರ ಟೌನ್
ಸ್ಥಳ : ಕನಕಪುರ
ದಿನಾಂಕ: 26/03/2026

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)

ಮೈಸೂರು ಬ್ಯಾಂಕ್ ಸರ್ಕಲ್ ಶಾಖೆ
ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ರಸ್ತೆ,
ರಾಜ್‌ದೂತ್ ಕಾಂಪ್ಲೆಕ್ಸ್, ಮೈಸೂರು ಬ್ಯಾಂಕ್ ವೃತ್ತ,
ಬೆಂಗಳೂರು–560002, ಇ–ಮೇಲ್: cb10446@canarabank.com

ಸ್ವಾಧೀನ ಸೂಚನೆ ಸ್ಥಿರಾಸ್ತಿ ಸೆಕ್ಷನ್ 13(4)

ಕೆಳಸಹಿದಾರರು **ಕೆನರಾ ಬ್ಯಾಂಕ್, ಮೈಸೂರು ಬ್ಯಾಂಕ್ ಸರ್ಕಲ್ ಶಾಖೆ** ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್, 2002 (2002 ಕಾಯಿದೆ 54)(ಇನ್ನು ಮುಂದೆ "ಕಾಯ್ದೆ" ಎಂದು ಉಲ್ಲೇಖಿಸಲಾಗಿದೆ) ನಿಯಮ 3 ಅನ್ನು ಓದಿಕೊಂಡಂತೆ ಪ್ರಕರಣ 13(12)ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ಸೂಚನೆ ತಲುಪಿದ ದಿನಾಂಕದಿಂದ **60 ದಿನಗಳ 12,72,60,215.99 (ರೂಪಾಯಿಗಳು ಹನ್ನೆರಡು ಕೋಟಿ ಎಪ್ಪತ್ತೆರಡು ಲಕ್ಷ ಅರವತ್ತು ಸಾವಿರದ ಇನ್ನೂರ ಹದಿನೈದು ಮತ್ತು ಪೈಸಾ ತೊಂಭತ್ತೊಂಭತ್ತು ಮಾತ್ರ)** ಮತ್ತು ಬಡ್ಡಿ ಮತ್ತು ಇತರೆ ಖರ್ಚುಗಳು ಸೇರಿದಂತೆ ಪಾವತಿ ಮಾಡಲು **ಸಾಲಗಾರರಾದ : 1.M/S ಮಿಲನ್ ಕ್ಲಾತಿಂಗ್** ನಂ 86/13G , ಸರ್ವೆ ನಂ 107, ದೊಡ್ಡಬಳ್ಳಾಪುರ ಕೈಗಾರಿಕಾ ಪ್ರದೇಶ, ಬಾಶೆಟ್ಟಿಹಳ್ಳಿ ಗ್ರಾಮ, ಕಸಬಾ ಹೋಬಳಿ, ಬೆಂಗಳೂರು–561203. **2. ಶ್ರೀ ಕಾಲಿದಾಸ್ ರಾಜು (ಪಾಲುದಾರರು)** ಬಿನ್ ಶ್ರೀ ಟಿ ರಾಜು, ಇದನ್ನು ಪತ್ರಿನಿಧಿಸುವವರು ಜಿಪಿಎ ಹೋಲ್ಡರ್ **ಶ್ರೀ.ರಾಜು ಹರಿದಾಸ್** ನಂ.787, 19 ನೇ ಮುಖ್ಯ ರಸ್ತೆ, 23 ನೇ ಕ್ರಾಸ್, ಎಚ್‌ಎಸ್‌ಆರ್ ಲೇಔಟ್, 2 ನೇ ಸೆಕ್ಟರ್, ಬೆಂಗಳೂರು–560102. **ಮತ್ತೊಂದು ವಿಳಾಸ: ಶ್ರೀ ಕಾಲಿದಾಸ್ ರಾಜು** ಬಿನ್ ಟಿ ರಾಜು, 5339 ಬಿರ್ಚ್ ಗ್ರೋವ್ ಡಾ. ಸಂಜೋಸ್ ಸಿಎ ಕ್ಯಾಲಿಫೋರ್ನಿಯಾ ಯುನೈಟೆಡ್ ಸ್ಟೇಟ್ಸ್–095123. **ಮತ್ತೊಂದು ವಿಳಾಸ:ಶ್ರೀ ಕಾಳಿದಾಸ್ ರಾಜು** ಬಿನ್ ಶ್ರೀ ಟಿ ರಾಜು ಪ್ಲಾಟ್ ನಂ.1351, ಕೊಹಿನೂರ್ ರೆಸಿಡೆನ್ಸಿ 16 ನೇ ಮುಖ್ಯ ಬ್ಲಾಕ್, ಎಇಸಿಎಸ್ ಲೇಔಟ್, ಬೇಗೂರು, ಸಿಂಗಸಂದ್ರ ಗ್ರಾಮ, ಬೆಂಗಳೂರು–560068 **3. ಹರಿ ದಾಸ್ ಆರ್** (ಪಾಲುದಾರರು) ಬಿನ್ ಶ್ರೀ ಟಿ ರಾಜು, ನಂ.787, 23 ನೇ ಕ್ರಾಸ್, 19 ನೇ ಮುಖ್ಯ ರಸ್ತೆ, ಸೆಕ್ಟರ್ 2, ಎಚ್‌ಎಸ್‌ಆರ್ ಲೇಔಟ್, ಬೆಂಗಳೂರು, ಕರ್ನಾಟಕ–560102. ಮತ್ತೊಂದು ವಿಳಾಸ: **ಶ್ರೀ ಹರಿದಾಸ್ ಆರ್** ಬಿನ್ ಟಿ ರಾಜು ಪ್ಲಾಟ್ ಸಂಖ್ಯೆ 1351, ಕೊಹಿನೂರ್ ರೆಸಿಡೆನ್ಸಿ, 16 ನೇ ಮುಖ್ಯ ಬ್ಲಾಕ್, ಎಇಸಿಎಸ್ ಲೇಔಟ್, ಬೇಗೂರು ಸಿಂಗಸಂದ್ರ ಗ್ರಾಮ, ಬೆಂಗಳೂರು–560068 ಇವರಿಗೆ **ದಿನಾಂಕ:27.01.2026** ರಂದು ಡಿಮ್ಯಾಂಡ್ ನೋಟೀಸ್‌ನ್ನು ನೀಡಲಾಗಿತ್ತು.

ಸಾಲಗಾರರು ಸದರಿ ಮೊಬಲಗನ್ನು ಮರುಪಾವತಿಸದೇ ಇರುವುದರಿಂದ ಮತ್ತು ಈ ಕೆಳಗೆ ತಿಳಿಸಲಾದ ಸಾಲಗಾರರು ಮತ್ತು ಸಾರ್ವಜನಿಕರಿಗೆ ಕೆಳಗೆ ವಿವರಿಸಲಾದ ಆಸ್ತಿಯನ್ನು ಈ ಮೇಲೆ ತಿಳಿಸಿದ ಕಾಯಿದೆಯ ಕಲಂ 13 ಸೆಕ್ಷನ್ (4) ರೊಂದಿಗೆ ನಿಯಮ 8 &9 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅವನು/ಅವಳು ಈ ಕೆಳಗೆ ವಿವರಿಸಲಾದ ಆಸ್ತಿಯನ್ನು **ದಿನಾಂಕ:01.04.2026** ರಂದು ಸ್ವಾಧೀನಪಡಿಸಿಕೊಂಡಿರುತ್ತಾರೆ.

ಸಾಲಗಾರರು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಸ್ವತ್ತಿನ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ **ಕೆನರಾ ಬ್ಯಾಂಕ್, ಮೈಸೂರು ಬ್ಯಾಂಕ್ ಸರ್ಕಲ್ ಶಾಖೆ** ಬರಬೇಕಾದ ಬಾಕಿ ಮೊತ್ತ **ರೂ.13,09,78,201.78 (ಹದಿಮೂರು ಕೋಟಿ ಒಂಬತ್ತು ಲಕ್ಷದ ಎಪ್ಪತ್ತೆಂಟು ಸಾವಿರದ ಇನ್ನೂರ ಒಂದು ಮತ್ತು ಎಪ್ಪತ್ತೆಂಟು ಪೈಸೆ ಮಾತ್ರ),** ಮತ್ತು ಬಡ್ಡಿ ಮತ್ತು ಅದರ ಖರ್ಚು–ವೆಚ್ಚಗಳು.

ಸಾಲಗಾರರ ಗಮನಕ್ಕೆ ತರುವುದೇನೆಂದರೆ ಭದ್ರತಾ ಸ್ವತ್ತುಗಳನ್ನು ಹಿಂಪಡೆಯುವ ಕಾಲಾವಕಾಶ ಕಾಯಿದೆಯ ಸೆಕ್ಷನ್ 13(8) ನಿಯಮದ ಅನ್ವಯ ಇರುತ್ತದೆ.

ಭದ್ರತಾ ಆಸ್ತಿಯ ವಿವರ

ಶೀರ್ಷಿಕೆದಾರರ ಹೆಸರು: ಶ್ರೀ .ರಾಜು ಕಾಳಿದಾಸ್ ಮತ್ತು ಶ್ರೀ.ಆರ್.ಹರಿದಾಸ್

1. ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡ ಸ್ಥಿರಾಸ್ತಿಯ ಫ್ಲಾಟ್ ನಂ, 13ಜಿ, ಬಾಶೆಟ್ಟಿಹಳ್ಳಿ ಪಂಚಾಯಿತಿ ಆಸ್ತಿ ನಂ, 86/13ಜಿ, ಇ–ಖಾತಾ ನಂ.150300301500620424 ದೊಡ್ಡಬಳ್ಳಾಪುರ ಇಂಡಸ್ಟ್ರಿಯಲ್ ಏರಿಯಾ ಈ ಆಸ್ತಿಯು ಸರ್ವೆ ನಂ 107, ಬಾಶೆಟ್ಟಿಹಳ್ಳಿ ಗ್ರಾಮ, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–561203ರಲ್ಲಿದೆ., ಒಟ್ಟು ವಿಸ್ತೀರ್ಣ 2016 ಚದರ ಮೀಟರ್ಸ್ ಜೊತೆಗೆ 3660 ಚದರ ಅಡಿ ವಿಸ್ತೀರ್ಣದ ಶೆಡ್, ಆಸ್ಬೆಸ್ಟೋಸ್ ಶೀಟ್, ರೆಡ್ ಆಕ್ಸೈಡ್ ನೆಲಹಾಸು ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಪ್ಲಾಟ್ ನಂ.12ಬಿ, ಉತ್ತರಕ್ಕೆ: ಪ್ಲಾಟ್ ನಂ.13ಎಫ್, ದಕ್ಷಿಣಕ್ಕೆ: ಪ್ಲಾಟ್ ನಂ.13ಹೆಚ್.

ಶೀರ್ಷಿಕೆದಾರರ ಹೆಸರು: ಶ್ರೀ .ರಾಜು ಕಾಳಿದಾಸ್

2.ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡ ವಾಸಯೋಗ್ಯ ಆಸ್ತಿಯ ನಂ 1351ರ ಎ ಬ್ಲಾಕ್, ಬಿಬಿಎಂಪಿ ಖಾತಾ ನಂ.873/1351, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 50 ಅಡಿ(15.243 ಮೀಟರ್ಸ್) ಮತ್ತು ಉತ್ತರದಿಂದ ದಕ್ಷಿಣಕ್ಕೆ: 100 ಅಡಿ(30.480 ಮೀಟರ್ಸ್) ಒಟ್ಟು ವಿಸ್ತೀರ್ಣ 5,000 ಚದರ ಅಡಿ, ಅಥವಾ 555.55 ಚದರ ಯಾರ್ಡ್ಸ್ಅಥವಾ 464.75 ಚದರ ಮೀಟರ್ಸ್, ಏರ್‌ಕ್ರಾಫ್ಟ್ ಎಂಪ್ಲಾಯೀಸ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್‌ನಿಂದ ರಚಿಸಲಾದ ಸರ್ವೆ ನಂ 6/1, 6/2, 8/1, 8/2, 8/3, 8/4, 8/5, 8/6, 10/1, 10/3, 15/1P, 17P, 18, 19, 21/1, 21/3, 22/1, 22/2, 23/1, 23/2, 23/3, 23/4, 23/5, 23/6, 23/7, 23/8, 23/9, 23/10, 23/11, 23/12, 23/13, 25/1, 25/2, 25/3, 25/4, 25/5, 25/6, 26/1P, 26/3, 27/1A, 27/1B, 27/2, 28/1A, 28/1B, 28/2, 28/3, 28/4, 28/5, 29/2, 30/1, 30/2, 31, 32/2, 32/3, 36, 38, 39, 43/1, 44, 46, 61/1, 61/2, 62, 63, 64, 67/1, 67/2, 67/3, 67/4, 67/6, 68/1, 72/1, 72/2, 72/3, 72/4, 73, 74, 75/1, 75/2, 75/3, 75/4, 75/5, 75/6, 75/7, 75/8, 75/9, 76/1, 76/3, 76/4, 77/1, 77/2, 77/3, 77/4, 77/5, 77/6, 78, 79/1, 79/2, 79/3, 79/4, 79/5, 79/6, 79/7, 79/8, 79/9, 80, 81/1, 81/2A, 81/2B, 81/2C, 81/3A, 81/3B, 83, 84, 85, 91/1, 91/2, 94/1, 94/2, 95, 96/1P, 96/2, 96/3, 97/1B, 97/2, 102/1, 102/2, 103/1, 103/3, 103/4, 103/5B, 103/6, 104/2, 105/1P, 105/2, 105/3, 106/1P, 106/2P, 106/3, 106/4, 106/5, 106/6, 109, 111/1 ಮತ್ತು 111/2 ಸಿಂಗಸಂದ್ರ ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು,ಬೆಂಗಳೂರು ಜಿಲ್ಲೆ, ದಿನಾಂಕ:12.11.1992 ರ ಆದೇಶ ಸಂಖ್ಯೆ: ಬಿಡಿಎ/ಟಿಪಿಎಂ/ಡಿಡಿ/1263/1992–93 ರ ಪ್ರಕಾರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅನುಮೋದಿಸಿದ ಲೇಔಟ್ ಯೋಜನೆಯಲ್ಲಿ, ಎಲ್ಲಾ ಹಕ್ಕುಗಳೊಂದಿಗೆ, ಮೇಲ್ಮೈ ಕೆಳಗೆ ಅಥವಾ ಮೇಲಿರುವ ಯಾವುದೇ ಪರಿಕರಗಳು ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.1352, ಪಶ್ಚಿಮಕ್ಕೆ: ನಿವೇಶನ ನಂ 1350, ಉತ್ತರಕ್ಕೆ: ನಿವೇಶನ ನಂ 1324, ದಕ್ಷಿಣಕ್ಕೆ: ರಸ್ತೆ.

ದಿನಾಂಕ : 01.04.2026
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಕೆನರಾ ಬ್ಯಾಂಕ್

ಮಾನ್ಯ ಗೌರವಾನ್ವಿತ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕನಕಪುರ
ಸಿ.ಮಿಸ್ ನಂ. 194/2026

ಅರ್ಜಿದಾರರು : ಶ್ರೀಮತಿ ಮಹದೇವಮ್ಮ ಮತ್ತು ಇತರರು ವಾಸ: ನಲ್ಲಹಳ್ಳಿ ಗ್ರಾಮ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

ವಿರುದ್ಧ

ಎದುರುದಾರರು : 1) ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಕನಕಪುರ ಮತ್ತು ಇನ್ನೊಬ್ಬರು.

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 & 2ನೇ ಅರ್ಜಿದಾರರ ಮಾವ, 3 ರಿಂದ 5ನೇ ಅರ್ಜಿದಾರರ ತಂದೆ ಮಾದಯ್ಯ @ ಮಾದಶೆಟ್ಟಿ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ನಲ್ಲಹಳ್ಳಿ ಗ್ರಾಮದಲ್ಲಿ ದಿನಾಂಕ: 15/02/1988 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ 16/05/2026 ರ ಬೆಳಿಗ್ಗೆ ಸರಿಯಾಗಿ 11–00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2026ರ ಏಪ್ರಿಲ್ 01ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಪಲ್ಲವಿ.ಕೆ., ವಕೀಲರು, ಕನಕಪುರ.
ದಿನಾಂಕ: 01/04/2026
ಕನಕಪುರ ಟೌನ್.

ಗೌರವಾನ್ವಿತ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 197/2026

ಅರ್ಜಿದಾರರು : ಶ್ರೀ ಸಾಬುಲಾಲ್ ಬಿನ್ ಲೇಟ್ ಬಾಜಿಸಾಬ್ @ ಮೊಹಮದ್ ಉಸ್ಮಾನ್ ವಯಸ್ಸು 87 ವರ್ಷ, ವಾಸ: ಕುರುಪೇಟೆ ಕನಕಪುರ ಟೌನ್, ಬೆಂಗಳೂರು ದಕ್ಷಿಣ ಜಿಲ್ಲೆ. ಹಾಲಿ ವಾಸ: # 1988, 3ನೇ ತಿರುವು, 20ನೇ ಮುಖ್ಯ ರಸ್ತೆ, ಜೆ.ಪಿ. ನಗರ, 2ನೇ ಹಂತ, ಬೆಂಗಳೂರು ದಕ್ಷಿಣ ಬೆಂಗಳೂರು –560078.

ವಿರುದ್ಧ

ಪ್ರತಿ ಅರ್ಜಿದಾರರು : ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ಪ್ರತಿನಿಧಿಸುವವರ, ಪೌರಾಯುಕ್ತರು ನಗರಸಭೆ ಕನಕಪುರ ಟೌನ್ ಬೆಂಗಳೂರು ದಕ್ಷಿಣ

ಪ್ರಕಟಣೆ

ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ಅಕ್ಕ ರವರು ಆದ ಫಾತಿಮಾಬಿ ಕೋಂ ಲೇಟ್ ಅಬ್ದುಲ್ ಜಬ್ಬರ್ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ಟೌನ್, ಕುರುಪೇಟೆಯಲ್ಲಿ ದಿನಾಂಕ : 06–07–2024 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿ ಪಡಿಸಿದ ದಿನಾಂಕದಂದು ಅಂದರೆ, 16/05/2026 ರ ಬೆಳಿಗ್ಗೆ 11:00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2026ರ ಏಪ್ರಿಲ್ 02ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ದೀಪಕ್.ಕೆ., ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 02/04/2026